


# ಫೇಕ್‌ನ್ಯೂಸ್ ಕಿಡಿ; ಕೇಡಿಗೆ ಮುನ್ನುಡಿ

ಅವರಿಗೆ ಆಪ್ಯಾಯಮಾನವಾಗಿತ್ತು. 'ವ್ಯಾಟಿಕನ್ನಿನ ಪೋಪ್ ಫ್ರಾನ್ಸಿಸ್ ಪ್ರಪಂಚಕ್ಕೇ ಶಾಕ್ ನೀಡಿದ್ದಾರೆ. ಅಮೆರಿಕದ ಮುಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಂದು ನುಡಿದಿದ್ದಾರೆ' ಎನ್ನುವ ಸುದ್ದಿಯನ್ನು ಹರಡಿದರು. ಆದರೆ ವಾಸ್ತವದಲ್ಲಿ ಪೋಪ್ ಆ ಬಗ್ಗೆ ಚಕಾರವನ್ನೂ ಎತ್ತಿರಲಿಲ್ಲ! ಅಲ್ಲಿಂದ ಮುಂದೆ ಸುಳ್ಳುಸುದ್ದಿಗಳ ಮೆರವಣಿಗೆ ಜಗತ್ತಿನ ಎಲ್ಲ ದೇಶಗಳಲ್ಲಿ ವಿಶದವಾಗಿ ಕಾಣತೊಡಗಿವೆ.

ಅಮೆರಿಕದ ಜೆಸ್ಟಿನ್ ರೋಲರ್ ಎನ್ನುವ ಪತ್ರಿಕಾ ವರದಿಗಾರ ಮತ್ತು ಬರಹಗಾರ, ಇಂತಹ ಸುಳ್ಳುಸುದ್ದಿಯ ವೆಬ್‌ಸೈಟ್ ಒಂದರ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದ. ಆ ಕೆಲಸವನ್ನು ಬಿಟ್ಟ ನಂತರ ದೂರದರ್ಶನವೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಾನು ನಡೆಸುತ್ತಿದ್ದ 'ಡಿಸ್‌ಇನ್ಫಾಮೀಡಿಯ' (Disinformedia) ಸಂಸ್ಥೆಯಲ್ಲಿ 2025 ಜನರನ್ನು ಸುಳ್ಳುಸುದ್ದಿಗಳನ್ನು ಸೃಷ್ಟಿಸಲು ನೇಮಿಸಿಕೊಂಡಿದ್ದನ್ನು ಬಹಿರಂಗಪಡಿಸಿದ. ಬರಿಯ ಜಾಹೀರಾತುಗಳ ದುಡ್ಡಿನಿಂದಲೇ ತಿಂಗಳೊಂದಕ್ಕೆ ಈ ಸಂಸ್ಥೆ 25–30 ಸಾವಿರ ಡಾಲರ್ ಆದಾಯ ಗಳಿಸುತ್ತಿದ್ದುದನ್ನು ಒಪ್ಪಿಕೊಂಡ. ಇವನಂತಹವೇ ಹಲವು ಸಂಸ್ಥೆಗಳಿರುವುದನ್ನೂ ಫೇಸ್‌ಬುಕ್‌ನಲ್ಲೂ ಇಂತಹ ದಂಧೆ ನಡೆಯುತ್ತಿದೆ ಎನ್ನುವುದನ್ನೂ ದೃಢಪಡಿಸಿದ. ಆದರೆ ಈ ಬಹಿರಂಗ ತಪ್ಪೊಪ್ಪಿಗೆಯಿಂದ ಏನೂ ಬದಲಾಗಲಿಲ್ಲ. ಈ ಸುಳ್ಳುಸುದ್ದಿಗಳು ಒಂದು ಪಕ್ಷವನ್ನು ಗೆಲ್ಲಿಸುವಷ್ಟು ಶಕ್ತವಲ್ಲ ಎನ್ನುವುದಷ್ಟೇ ಫೇಸ್‌ಬುಕ್‌ನ ಒಡೆಯ ಮಾರ್ಕ್ ಜುಕರ್‌ಬರ್ಗ್ ಪ್ರತಿಕ್ರಿಯೆಯಾಯ್ತು.

ಪಾಲ್ ಹಾರ್ಬರ್ ಎನ್ನುವ ಮತ್ತೊಬ್ಬ ವ್ಯಕ್ತಿ ಸೃಷ್ಟಿಸಿದ ಸುಳ್ಳುಸುದ್ದಿಗಳು 2016ರಲ್ಲಿ ಟ್ರಂಪ್ ಚುನಾವಣೆ ಗೆಲ್ಲಲು ಕಾರಣವಾದವು ಎನ್ನುವುದನ್ನು ಅಲ್ಲಿನ ಸಿ.ಐ.ಎ. ಮತ್ತು ಬೇಹುಗಾರಿಕಾ ತಂಡಗಳು ಒಪ್ಪಿಕೊಂಡವು. ಅದರೆ ಪಾಲ್ ಅದನ್ನು ಅಲ್ಲಗಳೆದ.

ಮತ್ತೊಂದು ಕುತೂಹಲಕರ ವಿಚಾರವೆಂದರೆ, 1932–33 ರಲ್ಲಿ ಮಾಸ್ಕೋ ಬ್ಯೂರೋದ ಮುಖ್ಯಸ್ಥ ವಾಲ್ಟರ್ ಡ್ಯೂರಂಟಿ ಅಮೆರಿಕದ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಗೆ ರಷ್ಯಾದ ಬಗ್ಗೆ ಬರೆದ ವರದಿಗಳ ಸಾಹಿತ್ಯಕ್ಕೆ 'ಪುಲಿಟ್ಜರ್' ಪ್ರಶಸ್ತಿ ಪಡೆದ.

ಆದರೆ ಮುಂದಿನ ವರ್ಷಗಳಲ್ಲಿ ನೇಮಕಗೊಂಡ ಅಂತರರಾಷ್ಟ್ರೀಯ ಶಾಂತಿಪಡೆಯು ಇಡೀ ವರದಿ ಸರಣಿಯನ್ನು 'ಸುಳ್ಳುಸುದ್ದಿ'ಗಳು ಎಂದು ಸಾಬೀತುಪಡಿಸಿತು. ಸುಳ್ಳುಸುದ್ದಿಗೂ ಪ್ರಶಸ್ತಿ ದೊರೆತದ್ದು ಇತಿಹಾಸದಲ್ಲಿ ಸುಳ್ಳುಸುದ್ದಿಗಳಿಗೆ ಸಂದಿರುವ ಪ್ರಾಶಸ್ತ್ಯ, ಮನ್ನಣೆ, ವಿಜಯ ಎಲ್ಲದರ ಪ್ರತೀಕವೂ ಆಗಿಹೋಯ್ತು. ಆದರೆ ಎಲ್ಲ ಸುಳ್ಳುಸುದ್ದಿಗಳು ಮೇಲಿನ ಉದಾಹರಣೆಯಂತೆ ಹುಸಿಯೆಂದು ಪ್ರಮಾಣಿತವಾಗುವುದಿಲ್ಲ. ಅವು ನಿಜ ಎಂದೇ ಬಿಂಬಿತವಾಗಿರುತ್ತವೆ.

1990ರಲ್ಲಿ ಶುರುವಾದ ಅಂತರ್ಜಾಲ ಜನಸಾಮಾನ್ಯರಿಗೆ ಮಾಹಿತಿಯನ್ನು ತಲುಪಿಸುವಲ್ಲಿ ಕ್ರಾಂತಿಯನ್ನೇ ಮಾಡಿದೆ. ಮಾಹಿತಿಗಳ ಲಭ್ಯತೆ ಜನರ ಅರಿವನ್ನು ಬಲಗೊಳಿಸಿದೆ. ಪ್ರತಿದಿನ ಸಾಗರೋಪಾದಿಯಲ್ಲಿ ಅಂತರ್ಜಾಲ ಮತ್ತು ಸಾಮಾಜಿಕ ತಾಣಗಳನ್ನು ತಲುಪುವ ಎಲ್ಲ ವಿಚಾರಗಳು ಸತ್ಯವಲ್ಲ ಎಂಬುದು ಎಲ್ಲರೂ ಬಲ್ಲ ಸತ್ಯ.

ನಮ್ಮ ಬದುಕನ್ನು ಬದಲಿಸದ ಹಲವು ವಿಚಾರಗಳ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕಿಲ್ಲ. ಆದರೆ ಚುನಾವಣೆಗಳು ದೇಶದ ಭವಿಷ್ಯವನ್ನು ಮತ್ತು ಆ ಮೂಲಕ ನಮ್ಮ ನಮ್ಮ ವೈಯಕ್ತಿಕ ಜೀವನವನ್ನು ಬದಲಾಯಿಸಬಲ್ಲವು. ಹಾಗೆಯೇ ನಮ್ಮ ನಂಬುಗೆಗಳನ್ನು, ಭಾವನೆಗಳನ್ನು ಘಾಸಿಗೊಳಿಸಬಲ್ಲವು. ಉದಾಹರಣೆಗೆ, ನೆಚ್ಚಿನ ಬರಹಗಾರ/ನಾಯಕನೊಬ್ಬನ ಬಗ್ಗೆ ಹರಡುವ ನಿಂದನೆಗಳು ನಮಗೆ ಅಚ್ಚರಿ–ಆಘಾತವನ್ನು ಉಂಟುಮಾಡುವ ಜೊತೆಗೆ, ಭಾವನಾತ್ಮಕವಾಗಿಯೂ ನಲುಗಿಸಬಲ್ಲವು. ಕೇಳುವ, ಕಾಣುವ, ಪಡೆಯುವ ಮತ್ತು ನೋಡುವ ವಿಚಾರಗಳು ನಿಜವೇ ಅಥವಾ ಸುಳ್ಳೇ ಎಂದು ವಿಶ್ಲೇಷಿಸಿಕೊಳ್ಳಬೇಕಾದ ಕಾಲದಲ್ಲಿ ನಾವು ಬದುಕುತ್ತಿದ್ದೇವೆ. ಸರಳವಾಗಿ ಓದಿ ನಂಬಬಹುದಾಗಿದ್ದ ದಿನಗಳಿಗೆ ಈಗ ತೆರೆಬಿದ್ದಿದೆ. ಹಾಗಾಗಿ ಸುಳ್ಳು–ಸತ್ಯವನ್ನು ಗುರ್ತಿಸುವ ಕಲಿಕೆಯ ಅಗತ್ಯ ನಮಗೆ ಖಂಡಿತ ಇದೆ.

ಭಾರತದಲ್ಲಿ ಹರಡುತ್ತಿರುವ ಸುಳ್ಳುಸುದ್ದಿಗಳು ಆಗಾಗ ಭಿನ್ನ ಜಾತಿ, ಧರ್ಮ, ಬಣಗಳ ನಡುವೆ ಘರ್ಷಣೆಗೆ ಎಡೆಮಾಡಿಕೊಟ್ಟಿವೆ. ರಾಜಕೀಯ ಭಿನ್ನತೆ (ಎಡಪಂಥೀಯ, ಬಲಪಂಥೀಯ ವಾದಗಳು), ಧಾರ್ಮಿಕತೆ (ಸಹಿಷ್ಣುತೆ, ಅಸಹಿಷ್ಣುತೆ), ಜಾತಿಗಳು (ಮೇಲು, ಕೀಳು), ಇತ್ಯಾದಿ ಸೂಕ್ಷ್ಮ ವಿಚಾರಗಳು ಪದೇ ಪದೇ ವಿವಾದಕ್ಕೆ ಗುರಿಯಾಗಿವೆ. ಸುಳ್ಳುಸುದ್ದಿಗಳ ಪರಿಧಿ ಬಹಳ ದೊಡ್ಡದಿದೆ. ಈ ಜಾಲ ಲಸಿಕೆಗಳು, ಸ್ಟಾಕ್ ಎಕ್ಸ್‌ಚೇಂಜ್, ಆಹಾರ ಪದಾರ್ಥಗಳ ಬಗೆಗಿನ ನ್ಯೂಟ್ರಿಷನ್‌ಗಳ ಅಂಕಿಅಂಶಗಳು ಸೇರಿದಂತೆ ಜನಸಾಮಾನ್ಯರ ಪ್ರತಿದಿನದ ಬದುಕಿಗೂ ಹರಡಿಕೊಂಡಿದೆ.